# ಆನಂದವನದ ತಪೋಮೂರ್ತಿ

❑ ಸರಸ್ವತಿ ವಿಜಯನಾರಸಿಂಹ

**ಉತ್ತರಕರ್ನಾಟಕದಲ್ಲಿನ ಅಗಡಿಯ ಆನಂದವನವು ಅನ್ನದಾನ, ಜ್ಞಾನದಾನ, ಅಖಂಡ ಭಜನೆ ಹಾಗೂ ನಾಮ ಪಾರಾಯಣಕ್ಕೆ ಪ್ರಸಿದ್ಧವಾದ ತೀರ್ಥಕ್ಷೇತ್ರ. ಈ ಶ್ರೀಸ್ಥಾನದ ವಿಭೂತಿಪುರುಷರಾದ ಶೇಷಾಚಲಸಾಧುಗಳ ಒಂದು ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಮತಿ ಸರಸ್ವತಿಯವರು ಚಲನಚಿತ್ರರಂಗದಲ್ಲಿ ಖ್ಯಾತರಾದ ದಿವಂಗತ ವಿಜಯ ನಾರಸಿಂಹ ಅವರ ಧರ್ಮಪತ್ನಿ.**

**ಧಾ**ರವಾಡ ಜಿಲ್ಲೆಯ ಹಾವೇರಿಯಿಂದ ಎಂಟು ಕಿ.ಮೀ. ಪೂರ್ವಕ್ಕೆ ಅಗಡಿ ಗ್ರಾಮವಿದೆ. ಹಿಂದಿನಿಂದಲೂ ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಹೊಂದಿದೆ ಈ ಗ್ರಾಮ. ಅನೇಕ ದೇವಸ್ಥಾನಗಳನ್ನು ಹೊಂದಿರುವ ಈ ಗ್ರಾಮ ಪ್ರಕೃತಿ ಸೊಬಗಿನ ತಾಣ. ಮಹಾಮಹಿಮಾನ್ವಿತರ ಜನ್ಮಸ್ಥಳ ಈ ದಿವ್ಯಕ್ಷೇತ್ರ. ವಿಜಾಪುರದಿಂದ ಬಂದು ಅಗಡಿಯಲ್ಲಿ ನೆಲೆಸಿದ ನರಸಿಂಹ ಭಟ್ಟರು ಶುದ್ಧ ಆಚರಣೆ ಮತ್ತು ನೈಷ್ಠಿಕ ಕರ್ಮಾಂಗಕ್ಕೆ ಹೆಸರುವಾಸಿ ಯಾಗಿದ್ದರು. ಚಿದಂಬರನ ಪರಮಭಕ್ತರಾದ ಭಟ್ಟರು ಅತಿಥಿ ಅಭ್ಯಾಗತರ ಸೇವೆಯಲ್ಲಿ ದೇವರನ್ನು ಕಾಣುತ್ತಿದ್ದರು. ಮಗ ರಾಮೇಶ್ವರನೂ ತಂದೆಯಂತೆ ಸದಾಚಾರ ಸಂಪನ್ನನಾಗಿ ವೇದವೇತ್ತ ನಾಗಿದ್ದ. ಹಿರಿಯರು ನಿಶ್ಚೈಸಿದ ಶಾನುಭೋಗ ಮನೆತನದ ಹೆಣ್ಣನ್ನು ಮದುವೆಯಾಗಿ ತಾಯ್ತಂದೆಯರ ಸಂತೋಷಕ್ಕೆ ಮೆರುಗು ನೀಡಿದ್ದ. ಪತ್ನಿ ಲಕ್ಷ್ಮೀದೇವಿ ಅಪರೂಪದ ಗೃಹಿಣಿ, ಸದ್ಗುಣಸಂಪನ್ನೆ.

ದೇವೀ ಉಪಾಸಕರೊಬ್ಬರು ಭವಿಷ್ಯ ನುಡಿದಂತೆ ಆ ಮನೆ ಯಲ್ಲಿ ಚಿದಂಬರ ಗುರುವಿನ ಅವತಾರಕ್ಕೆ ನಾಂದಿಯಾಗಿ ಔದುಂಬರ ವೃಕ್ಷ ಕಾಣಿಸಿಕೊಂಡಿತು. ಲಕ್ಷ್ಮೀದೇವಿಯ ಎರಡನೇ ಮಗನಾಗಿ ಚಿದಂಬರಾಂಶಸಂಭೂತನ ಜನನವಾಯಿತು. ಹಿರಿಯ ಮಗ ವೆಂಕಟೇಶನ ಛಾಯಾನುವರ್ತಿಯಾಗಿದ್ದ ಪುಟ್ಟ ಶೇಷಾಚಲ ಬಾಲ್ಯದಿಂದಲೇ ಏಕಾಂತಪ್ರಿಯನಾಗಿದ್ದ. ಅಣ್ಣನೊಂದಿಗೆ ಶಾಲೆಗೆ ಹೋಗುತ್ತಿದ್ದರೂ ಶೇಷಾಚಲ ವಿದ್ಯೆಯತ್ತ ಮನಗೊಡುತ್ತಿರಲಿಲ್ಲ. ಯಾವುದೋ ಚಿಂತೆಯಲ್ಲಿ ಮುಳುಗಿರುತ್ತಿದ್ದ. ಸಹಪಾಠಿಗಳಿಂದ ದೂರವಾಗಿ ಕುಳಿತಿರುತ್ತಿದ್ದ. ಗುರುಗಳು ಕೂಗಿ ಕರೆದಾಗ ಅವರತ್ತ ತಿರುಗುತ್ತಿರಲಿಲ್ಲ. ಒಂದೆರಡು ಬಾರಿ ಪೆಟ್ಟು ತಿನ್ನುತ್ತಿದ್ದ. ತಮ್ಮನನ್ನು ಎಲ್ಲರೂ ದಡ್ಡನೆನ್ನುತ್ತಿದ್ದುದು ಕಂಡು ಅಣ್ಣನಿಗೆ ನೋವಾಗುತ್ತಿತ್ತು. ಮನೆಯಲ್ಲಿ ಈ ಬಗ್ಗೆ ದೂರು ನೀಡುತ್ತಿದ್ದ. ಎರಡು ವರ್ಷಗಳು ಸತತವಾಗಿ ಶಾಲೆಗೆ ಹೋದರೂ 'ಅ'ಕಾರ ಬರೆಯುವುದನ್ನೂ ಕಲಿ ಯದ ಬಾಲಕ ಶೇಷಾಚಲ 'ಮೂಢ'ನೆಂದು ಎಲ್ಲರ ಹಿಯಾಳಿಕೆಗೆ ಗುರಿಯಾದ. ಅಣ್ಣನಿಗಿಂತ ಕಪ್ಪಗಿದ್ದ ಶೇಷಾಚಲ ಸ್ವಲ್ಪ ಕುಂಟುತ್ತ ನಡೆಯುತ್ತಿದ್ದ. ಹುಡುಗರು ಅವನನ್ನು 'ಕುಂಟ ಶೇಷಾಚಲ' ಎಂದೇ ಕರೆಯುತ್ತಿದ್ದರು.

ಮಂದಮತಿ ಎನ್ನಿಸಿಕೊಂಡ ಶೇಷಾಚಲನನ್ನು ಶಾಲೆ ಬಿಡಿಸಿ ಸಂಸ್ಕೃತಾಭ್ಯಾಸಕ್ಕೆ ಕಳಿಸತೊಡಗಿದರು. ಹಲಕೆಲವು ಶ್ಲೋಕಗಳನ್ನು ಕಲಿತ ಶೇಷಾಚಲ ಬರಹದತ್ತ ಗಮನ ಕೊಡಲಿಲ್ಲ. ಭಗವನ್ನಾಮ ಜಪಕ್ಕೆ ಸಹಕಾರಿಯಾದವುಗಳನ್ನು ಚಿತ್ತವಿಟ್ಟು ಕೇಳುತ್ತಿದ್ದ. ಊರ ಮುಂದಿನ ಹನುಮ ದೇವಾಲಯದಲ್ಲಿ ಏಕಾಂತವಾಗಿ ಕಾಲ



ಅಗಡಿಯ ಸದ್ಗುರು ಶ್ರೀ ಶೇಷಾಚಲ ಅವರು

ಕಳೆಯುತ್ತಿದ್ದ. ಬ್ರಹ್ಮೋಪದೇಶವಾದ ಮೇಲಾದರೂ ಶೇಷಾ ಚಲನು ಸರಿಹೋಗುವನೆಂದು ಬಯಸಿದ ತಾಯ್ತಂದೆಯರು ಅವನಿಗೆ ಉಪನಯನ ಮಾಡಿದರು. 'ಮಾತೃಭಿಕ್ಷೆ'ಯಲ್ಲಿ 'ಭಿಕ್ಷಾಂ ದೇಹಿ' ಎಂದುದನ್ನೇ ಹಿಡಿದುಕೊಂಡು ಶೇಷಾಚಲ ಮಧುಕರಿ ಯನ್ನೇ ತನ್ನ ಮಧ್ಯಾಹ್ನದ ಊಟಕ್ಕೆ ಮಾರ್ಗವಾಗಿಸಿಕೊಂಡ. ಊರವರು 'ಭಿಕ್ಷೆಬೇಡುವ ಕರಿಶೇಷ' 'ಕುಂಟಶೇಷ' ಎನ್ನುತ್ತ ಲಿದ್ದರು. ಮನೆಯವರಿಗೆಲ್ಲಾ ಇದರಿಂದ ತುಂಬಾ ಅಪಮಾನ ವೆನ್ನಿಸುತ್ತಿತ್ತು. ಶುದ್ಧ ಅಂತರಂಗದ ಬಾಲಬ್ರಹ್ಮಚಾರಿ ಇದಾ ವುದಕ್ಕೂ ಕಿವಿಗೊಡುತ್ತಿರಲಿಲ್ಲ. ಹುಟ್ಟಿನಿಂದಲೇ ಸಿಟ್ಟನ್ನು ಸುಟ್ಟಿದ್ದ ಶೇಷಾಚಲ ನಿರಹಂಕಾರಿಯಾಗಿದ್ದ. ಸಂಸ್ಕೃತಾಭ್ಯಾಸದಿಂದ ಬಾಲಕ ತನ್ನ ಆತ್ಮೋದ್ಧಾರಕ್ಕೆ ಬೇಕಾದುದನ್ನು ಅರಿತಿದ್ದ. ವಿದ್ಯೆ ಮಾನವನ ಹೊಟ್ಟೆ ಹೊರೆಯುವುದಕ್ಕಲ್ಲ ಎಂದು ಆತ ತಿಳಿದಿದ್ದ.

ಬೆಳಗಿನ ಜಾವ ಚಿದಂಬರನ ಅಭಂಗಗಳನ್ನು ಸುಶ್ರಾವ್ಯವಾಗಿ ಹಾಡಿ ಕಾಕಡಾರತಿ ಮಾಡಿ ಸಂತೋಷಪಡುತ್ತಿದ್ದ. ದೇವತಾರ್ಚನೆ

ಗೆಂದು ಊರ ತೋಟಗಳನ್ನು ಸುತ್ತಾಡಿ ವಿಧವಿಧದ ಪುಷ್ಪಗಳನ್ನು ಸಂಗ್ರಹಿಸಿ ತರುತ್ತಿದ್ದ. ಭಗವದರ್ಚನೆಯಲ್ಲಿ ಗಂಟೆಗಳನ್ನು ಕಳೆಯುತ್ತಿದ್ದ. ಒಮ್ಮೊಮ್ಮೆ ಸೂರ್ಯನಮಸ್ಕಾರ ಮಾಡಲು ಉಪಕ್ರಮಿಸಿದರೆ ಸಾವಿರ ನಮಸ್ಕಾರಗಳಾದರೂ ಹುಡುಗನಿಗೆ ಪರಿವೆ ಇರುತ್ತಿರಲಿಲ್ಲ. ದೇಹದಂಡ, ವಾಗ್ದಂಡ, ಮನೋದಂಡಗಳಿಂದ ಭಗವತ್ಸೇವೆ ಮಾಡುತ್ತ ಬಾಲಕ ತ್ರಿದಂಡಿಯಾಗಿದ್ದ. ಎಲ್ಲರಿಂದಲೂ ದೂರವಿರುತ್ತಿದ್ದ ಈ ಸಾಧಕ ಚಿದಂಬರಧ್ಯಾನದಲ್ಲಿಯೇ ತನ್ನನ್ನು ಮನೋವಾಕ್ಕಾಯಗಳಿಂದ ತೊಡಗಿಸಿಕೊಂಡಿದ್ದ.

ಇಪ್ಪತ್ತು ವರ್ಷದವನಾದರೂ ಮಗ ಸರಿಹೋಗಲಿಲ್ಲವೆಂದು ತಾಯ್ತಂದೆಯರು ಕೊರಗಲಾರಂಭಿಸಿದರು. ತಾಯಿ ಶೇಷಾಚಲನನ್ನು ಬಳಿಗೆ ಕರೆದು ದಿಟ್ಟಿಸಿ ನೋಡಿ, "ನಿಜವಾಗಿಯೂ ಹೇಳು, ನೀನು ಯಾರೆಂದು. ನಾವು ಚಿದಂಬರನನ್ನು ಬೇಡಿ ಪಡೆದ ಮಗನೋ ಅಥವಾ ವೈರ ಸಾಧಿಸಲೆಂದೇ ಹುಟ್ಟಿ ಬಂದ ಶತ್ರುವೋ!" ಎಂದು ಕಣ್ಣೀರುಗರೆದರು. ತಾಯಿಯ ಮಾತಿನಿಂದ ಶೇಷಾಚಲ ಅವಾಕ್ಕಾದ. ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಅನಂತರ ದೇಹಭಾವಕ್ಕೆ ಬಂದು, "ಅಮ್ಮಾ, ನೀನು ಕಣ್ಣೀರುಗರೆಯಬೇಡ. ಇಷ್ಟು ದಿನವೂ ನನ್ನ ದಡ್ಡತನದಿಂದ ನೀವು ಪಟ್ಟ ನೋವನ್ನು ಇನ್ನು ಮುಂದೆ ಪರಿಹರಿಸುವೆ. ಇದು ಖಚಿತ" ಎಂದು ದೃಢವಾಗಿ ನುಡಿದ. ತಾಯಿ ಶೇಷಾಚಲನ ಮೈದಡವಿದಳು.

ತಾಯಿಯ ಮಾತು ಶೇಷಾಚಲನ ಮನವನ್ನು ಕಲಕಿದ್ದಿತು. ಅಂದಿನಿಂದಲೇ ಬಿಟ್ಟುಬಿಟ್ಟಿದ್ದ ಸಂಸ್ಕೃತಾಭ್ಯಾಸವನ್ನು ಮತ್ತೆ ಪ್ರಾರಂಭಿಸಿದ. ತಾಳಿಕೋಟೆ ಶೇಷಭಟ್ಟರಿಂದ ವೇದವೇದಾಂಗಗಳ ಅಧ್ಯಯನ ಮಾಡಲಾರಂಭಿಸಿದ. ಅಣ್ಣನಿಂದ ಯಜ್ಞಯಾಗಾದಿಗಳನ್ನು ಮಾಡಲು ಕಲಿತ. ಕಲಿತುದುದನ್ನು ರಾತ್ರಿಯ ಪ್ರಶಾಂತವಾತಾವರಣದಲ್ಲಿ ಮತ್ತೆ ಮತ್ತೆ ಮನನ ಮಾಡಿಕೊಳ್ಳಲಾರಂಭಿಸಿದ. ಎರಡೇ ವರ್ಷದಲ್ಲಿ ಶೇಷಾಚಲನಲ್ಲಿ ಅದ್ಭುತವಾದ ಮಾರ್ಪಾಟಾಯ್ತು. ವೇದವೇದಾಂಗಗಳನ್ನು ಅಸ್ಖಲಿತವಾಗಿ ಹೇಳತೊಡಗಿದ. ಹಂಗಿಸಿ ಗೇಲಿ ಮಾಡುತ್ತಿದ್ದವರು ಮೂಗಿನ ಮೇಲೆ ಬೆರಳಿಟ್ಟು, ಹುಡುಗನ ವಿದ್ವತ್ತಿಗೆ ಮಾರುಹೋದರು. ಹೊಗಳಿಕೆಯ ಮಳೆಗರೆದರು. ಇದರಿಂದ ಶೇಷಾಚಲ ಹಿಗ್ಗಲಿಲ್ಲ, ನಿರ್ಲಿಪ್ತನಾಗಿಯೇ ಇದ್ದ. ಶೇಷಾಚಲನ ಸಾಧನಾಪಥದಲ್ಲಿ ಇದರಿಂದ ಯಾವ ವ್ಯತ್ಯಾಸವೂ ಆಗಲಿಲ್ಲ. ಮಗನ ಈ ಮಾರ್ಪಾಟಿನಿಂದ ತಾಯಿ ಹಿಗ್ಗಿಹೋದಳು. ಆಕೆಯ ಅಪ್ಪಣೆಯಂತೆ ಮರೋಳ ಗ್ರಾಮದ ಭೀಮರಾಯರ ಪುತ್ರಿ ತುಳಸಾದೇವಿಯೊಂದಿಗೆ ಶೇಷಾಚಲನ ವಿವಾಹ ನಡೆಯಿತು. ಮನೆಯ ಜವಾಬ್ದಾರಿ ಹೊತ್ತು ಅಣ್ಣನ ಭಾರ ಸ್ವಲ್ಪ ಕಡಮೆ ಮಾಡಿದ. ತಾಯಿಯ ಅವಸಾನಾನಂತರ ತುಳಸಾದೇವಿ ಶೇಷಾಚಲರು ಮನೆಯ ನಿರ್ವಾಹಕರಾದರು.

ಅಣ್ಣನಿಗೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕೆಲಸ ಹೆಚ್ಚಾಗಿ ಬರುತ್ತಿದ್ದುದರಿಂದ ಶೇಷಾಚಲರೇ ಮನೆಯ ದೇವರ ಪೂಜೆಯನ್ನೂ ವಹಿಸಿಕೊಂಡರು. ಊರಲ್ಲಿನ ವೆಂಕಟೇಶ ದೇವಾಲಯದ ಪೂಜೆಯೂ ಶೇಷಾಚಲರಿಗೇ ಬಂತು. ದೇವಾಲಯದಲ್ಲಿ ನಾಮಸ್ಮರಣೆ, ಭಜನೆ, ಸಪ್ತಾಹ ಸಮಾರಾಧನೆಗಳೂ ನಡೆಯತೊಡಗಿದುವು. ದೇವಾಲಯಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಇಮ್ಮಡಿಸಿತು. ಕಟ್ಟಡವೂ ನವೀನವಾಗಿ ಕಟ್ಟಲ್ಪಟ್ಟಿತು. ಭಕ್ತರ ದರ್ಶನಕ್ಕೆ ಅನುಕೂಲವಾಗುವಂತೆ ಶಿಲಾಪೀಠದ ಮೇಲೆ ವೆಂಕಟೇಶನ ಪ್ರತಿಮೆ ಪ್ರತಿಷ್ಠಿತ ವಾಯಿತು. ಶೇಷಾಚಲರ ದೃಷ್ಟಿಯಲ್ಲಿ ವೆಂಕಟೇಶ ಬರಿಯ ಪ್ರತಿಮೆಯಾಗಿರದೆ ಸಜೀವ ವೆಂಕಟೇಶನೇ ಆಗಿದ್ದ.

ದೇಶದಲ್ಲೆಲ್ಲಾ ತಲೆದೋರಿದ ಕ್ಷಾಮ ಅಗಡಿ ಗ್ರಾಮಕ್ಕೂ ವ್ಯಾಪಿಸಿತು. ಬೆಳೆ ಬತ್ತಿಹೋಗಿ ರೈತರು ಕಂಗಾಲಾದರು. ಹಸಿವಿನ ಹಾಹಾಕಾರ ಎಲ್ಲೆಡೆಯೂ ತಾಂಡವವಾಡಿತು. ಶೇಷಾಚಲರು ತಮ್ಮ ಮನೆಯಲ್ಲಿ ಬಡಬಗ್ಗರಿಗೆ ಆಶ್ರಯ ಕೊಡುವುದಲ್ಲದೆ ತಮ್ಮ ಪಾಲಿನ ಆಹಾರದಲ್ಲಿ ಆ ಹೊತ್ತಿಗೆ ಬಂದವರಿಗೆ ಹಂಚಿಬಿಡುತ್ತಿದ್ದರು. ಊರಿನ ಜನಕ್ಕೆ ಬೇಕಾದ ಎಲ್ಲಾ ಸೇವೆಯನ್ನೂ ತಾವೇ ನಿಂತು ಮಾಡುತ್ತಿದ್ದರು. ತಮ್ಮಲ್ಲಿದ್ದ ಬಟ್ಟೆಗಳಲ್ಲಿ ಲೋಕಲಜ್ಜೆಯ ರಕ್ಷಣೆಗೆ ಬೇಕಾದಷ್ಟನ್ನು ಮಾತ್ರ ತಮ್ಮ ಮನೆಯ ಹೆಂಗಸರು, ಮಕ್ಕಳಿಗೆ ಇಟ್ಟುಕೊಂಡು ಮಿಕ್ಕದ್ದನ್ನೆಲ್ಲಾ ಹಂಚಿಕೊಟ್ಟರು. ಮೊದಲಿಂದಲೂ ಅವರಲ್ಲಿ ಮನೆಮಾಡಿದ್ದ 'ದಾನಿ' ಈಗ ಸ್ವೇಚ್ಛೆಯಾಗಿ ವಿಜೃಂಭಿಸಿದ. ತುಳಸಾದೇವಿಯವರೂ ಈ ನಿಟ್ಟಿನಲ್ಲಿ ಪತಿಯ ಛಾಯಾನುವರ್ತಿಯಾದರು. ದೂರದೂರಿನಿಂದ ಬರುತ್ತಿದ್ದ ಅತಿಥಿಗಳಿಗೂ ಮನೆಯವರಿಗೂ ಗಂಜಿಯೂಟ ಸಿದ್ಧಪಡಿಸುವುದರಲ್ಲಿ ಬಸವಳಿಯುತ್ತಿರಲಿಲ್ಲ.

ಶೇಷಾಚಲ ಸಾಧುಗಳು ಅದ್ವೈತ ಸಿದ್ಧಾಂತದಲ್ಲಿ ಅವಿಚ್ಛಿನ್ನ ಭಕ್ತಿ ಇಟ್ಟಿದ್ದರು. ಶೃಂಗೇರಿಯ ದಕ್ಷಿಣಾಮ್ನಾಯ ಶಾರದಾಪೀಠದ ಜಗದ್ಗುರುಗಳ ಕೃಪಾಸಂಪಾದನೆಗಾಗಿ ಹೊರಡುವ ಮನಸ್ಸು ಮಾಡಿದರು. ತಂದೆಯವರ ಅಪ್ಪಣೆ ಪಡೆದು ಜೊತೆಯಲ್ಲಿ ಮೂವರು ವಿದ್ವನ್ಮಣಿಗಳನ್ನೂ ಕರೆದುಕೊಂಡು ಶೃಂಗೇರಿಗೆ ಕಾಲ್ನಡಿಗೆಯಲ್ಲಿ ಹೊರಟರು. ತಮ್ಮ ಒಪ್ಪೊತ್ತಿನ ಊಟಕ್ಕೆ ಅಲ್ಲಲ್ಲಿ ಮಧುಕರಿ ವೃತ್ತಿಯೇ ಇವರಿಗೆ ಆಧಾರ.

ಆ ಕಾಲಕ್ಕೆ ಶೃಂಗೇರಿಯಲ್ಲಿ ಮಹಾತಪಸ್ವಿಗಳೂ, ಆತ್ಮಜ್ಞಾನಸಂಪನ್ನರೂ ಆಗಿದ್ದ ಶ್ರೀಶ್ರೀನೃಸಿಂಹ ಭಾರತೀ ಸ್ವಾಮಿಗಳು ಪೀಠದಲ್ಲಿದ್ದರು. ದಿನನಿತ್ಯದ ಭಿಕ್ಷೆ ಸ್ವೀಕರಿಸಿದ ಅನಂತರ ಜಗದ್ಗುರುಗಳು ಕೈಕಾಲು ತೊಳೆದುಕೊಳ್ಳಲು ಒಂದು ನಿರ್ದಿಷ್ಟ ಸ್ಥಳಕ್ಕೆ ಬರುತ್ತಿದ್ದರು. ಅದನ್ನರಿತ ಶ್ರೀ ಶೇಷಾಚಲರು ದಿನವೂ ಗುರುಗಳು ಕೈಕಾಲು ತೊಳೆದುಕೊಂಡು ಹೋದನಂತರ ಆ ಪಾದೋದಕವನ್ನು ಕಣ್ಣಿಗೊತ್ತಿಕೊಂಡು, ತಲೆಗೂ ಮೈಗೂ ಸವರಿಕೊಂಡು, ಅದನ್ನು ಸ್ವಲ್ಪ ಪಾನಮಾಡಿ ಮಧುಕರಿಗೆ ಹೋಗುತ್ತಿದ್ದರು. ಜ್ಞಾನದೃಷ್ಟಿಯಿಂದ ಇದನ್ನರಿತ ಶ್ರೀಗುರುಗಳು ಶ್ರೀಶೇಷಾಚಲರ ಸಹನೆಯನ್ನು ಪರೀಕ್ಷಿಸಿದಂತಿತ್ತು. ಶಿಷ್ಯರನ್ನು ಈ ವ್ಯಕ್ತಿಯ ಬಗ್ಗೆ ವಿಚಾರಿಸುತ್ತಲೇ ಇದ್ದರು. ಸತತವಾಗಿ ಮೂರು ತಿಂಗಳು ಇದೇ ರೀತಿ ನಡೆಯಿತು. ಒಂದು ದಿನ ಗುರುಗಳು ನಿರ್ದಿಷ್ಟ ಸಮಯಕ್ಕೂ ಮೊದಲೇ ಬಂದು ಒಳಬಾಗಿಲಲ್ಲಿ ನಿಂತರು. ಎಂದಿನಂತೆ ಶೇಷಾಚಲರು ಪಾದೋದಕ ಸ್ವೀಕರಿಸಿ ಗುರುವು ಹೋದ ದಿಕ್ಕಿಗೆ ಸಾಷ್ಟಾಂಗವೆರಗಿ ಮೇಲೇಳುವಾಗ ಸಾಕ್ಷಾತ್ತಾಗಿ ನಿಂತ ಶ್ರೀಗುರುಗಳನ್ನು ಕಂಡು ಅವಾಕ್ಕಾದರು. ತನ್ನಿಂದ ಏನಾದರೂ ತಪ್ಪಾಗಿರಬಹುದೆ ಎಂಬುವ

ಅಪರಾಧಿಭಾವವೂ ಶೇಷಾಚಲರನ್ನು ಕಾಡದಿರಲಿಲ್ಲ. ಜಗದ್ಗುರುಗಳು ಶೇಷಾಚಲರನ್ನು ಕೈಹಿಡಿದು ತಮ್ಮ ಬಳಿಗೆ ಕರೆದು ಮುಗುಳ್ನಗುತ್ತಾ "ಶ್ರೀ ಶಾರದಾಚಂದ್ರಮೌಳೀಶ್ವರರ ಕೃಪೆ ನಿಮ್ಮ ಮೇಲಿದೆ. ಇಂದು ನಮ್ಮೊಂದಿಗೆ ಪ್ರಸಾದ ಸ್ವೀಕರಿಸಲು ಸಹಪಂಕ್ತಿಗೆ ಬರಬೇಕು" ಎಂದು ಆಣತಿ ಮಾಡಿದರು. ಜಗದ್ಗುರುಗಳು ತಮ್ಮ ಎಲೆಯಿಂದ ಪರಮಾನ್ನದ ಮೂರು ತುತ್ತುಗಳನ್ನು ಶೇಷಾಚಲರ ಎಲೆಗೆ ಹಾಕಿದರು. ಭಕ್ತಿ, ಜ್ಞಾನ, ವೈರಾಗ್ಯದ ಪರಮಾನ್ನ ಉಂಡ ಶೇಷಾಚಲರಿಗೆ ಮಹದಾನಂದವಾಯಿತು. ಅವರನ್ನು ಏಕಾಂತದಲ್ಲಿ ಬರಮಾಡಿಕೊಂಡು ಶ್ರೀಗುರುಗಳು ಉಪದೇಶಮಂತ್ರವನ್ನು ಕಿವಿಯಲ್ಲಿ ಬೋಧಿಸಿದರು. ಶಾರದಾದೇವಿಯ ಸುಂದರ ಪ್ರತಿಮೆಯುಳ್ಳ ಮಂದಾಸನವನ್ನು ಗುರುಗಳಿಂದ ಪಡೆದು ಶೇಷಾಚಲರು ಅಲ್ಲಿಂದ ಹೊರಟರು.

ಉಡುಪಿಯ ಪರ್ಯಾಯ ಅವರನ್ನು ಸೆಳೆಯಿತು. ಅನ್ನಬ್ರಹ್ಮನ ದೇಗುಲದಲ್ಲಿ ಅವರ ಪ್ರವಚನವೇರ್ಪಟ್ಟಿತು. ನಿರರ್ಗಳವಾಗಿ ಶೇಷಾಚಲರು ಭಗವದ್ಗೀತೆಯನ್ನು ಧರೆಗಿತ್ತ ಲೀಲಾನಾಟಕ ಸೂತ್ರಧಾರಿ ಶ್ರೀಕೃಷ್ಣನನ್ನು ಬಣ್ಣಿಸಿ ಮಾತಾಡಿದುದು ಪಂಡಿತ ಪಾಮರರನ್ನೆಲ್ಲಾ ರಂಜಿಸಿತು. ಇದು ಶ್ರೀಶಾರದಾದೇವಿಯ ಕೃಪೆಯಿಂದಲೇ ಸಾಧ್ಯವಾಯಿತೆಂದು ಶೇಷಾಚಲರು ಭಾವಿಸಿದರು.

ಅಗಡಿಯವರೇ ಆಗಿದ್ದ ನಾರಾಯಣಾಚಾರ್ಯರು ಪಂಡಿತರಾಗಿದ್ದರೂ ಸ್ವಾಭಿಮಾನಿ. ಬರುತ್ತಿದ್ದ ವೇತನದಲ್ಲಿ ಸಂಸಾರರಥ ಸಾಗಿಸುವುದು ದುಸ್ಸಾಧ್ಯವೆನಿಸುತ್ತಿತ್ತು. ದಿನದಿನಕ್ಕೆ ಬೆಳೆಯುತ್ತಿದ್ದ ಸಂಸಾರದ ಕಷ್ಟಗಳಿಗೂ, ಏರುತ್ತಿದ್ದ ಧಾರಣೆವಾಸಿಗಳಿಗೂ ಅವರು ತತ್ತರಿಸಿ ಹೋಗುತ್ತಿದ್ದರು. ಮುರಗೋಡಿನಲ್ಲಿ ಚಾತುರ್ಮಾಸ್ಯದಲ್ಲಿದ್ದ ಶೇಷಾಚಲರನ್ನು ಸಮೀಪಿಸಿದರೂ ತಮ್ಮ ಕಷ್ಟಗಳನ್ನು ಅರುಹಲಾರದೆ ಹೋಗಿದ್ದರು. ಒಂದು ದಿನ ಶೇಷಾಚಲ ಸಾಧುಗಳನ್ನು ಕಾಣಲು ಬಂದ ಪ್ರತಿಷ್ಠಿತ ವ್ಯಕ್ತಿಯೊಬ್ಬರನ್ನು ಉದ್ದೇಶಿಸಿ ಸಾಧುಗಳು "ನಮ್ಮ ನಾರಾಯಣಾಚಾರ್ಯರಿಗೆ ಒಂದು ಒಳ್ಳೆಯ ಕೆಲಸ ಕೊಡಿಸಿ. ಸಾಲದ ಹೊರೆಯಲ್ಲಿ ಸಂಸಾರರಥ ಸಾಗಿಸುವುದೇ ಕಷ್ಟವಾಗಿ ಅವರು ಒದ್ದಾಡುತ್ತಿದ್ದಾರೆ" ಎಂದು ಹೇಳಿದುದನ್ನು ಕೇಳಿಸಿಕೊಂಡ ನಾರಾಯಣಾಚಾರ್ಯರಿಗೆ ಶ್ರೀಶೇಷಾಚಲರು ಎಷ್ಟು ಚೆನ್ನಾಗಿ ಮನದ ಮಾತನ್ನು ಅರ್ಥಮಾಡಿಕೊಳ್ಳುತ್ತಾರೆ ಎಂದೆನಿಸಿ ಕಣ್ಣೀರು ಬಂದಿತು.

ಶೇಷಾಚಲ ಗುರುಗಳ ಪರಿವಾರ ಬೆಳೆಯುತ್ತಾ ಬಂತು. ಬಂದುಹೋಗುವ ಭಕ್ತರೂ ಅಧಿಕವಾದರು. ಕ್ರಮೇಣ ಒಂದು ಆಶ್ರಮವೇ ನಿರ್ಮಾಣವಾಯಿತು. ಅದನ್ನೇ 'ಆನಂದವನ' ಎಂದು ಕರೆಯುತ್ತಿದ್ದರು. ಅಗಡಿಯಲ್ಲಿ ಒಮ್ಮೆ ದೊಡ್ಡಾಟ ನಡೆಯುತ್ತಿತ್ತು. ದೂರದೂರದ ಗ್ರಾಮದವರೆಲ್ಲಾ ಮೊದಲು ಅಗಡಿಯ ಆಶ್ರಮಕ್ಕೆ ಬಂದು ದೊಡ್ಡಾಟ ನೋಡಲು ಹೊರಟರು. ತಮ್ಮ ತಮ್ಮ ಒಡವೆ ಮತ್ತು ಅಮೂಲ್ಯವಸ್ತುಗಳನ್ನು ಆಶ್ರಮದೊಳಗೆ ಎಲ್ಲೆಂದರಲ್ಲಿ ಬಿಸುಟು ಹೋಗಿದ್ದರು. ಕೋಣೆಯಲ್ಲಿದ್ದ ಗುರುಗಳು ಎದ್ದು ಬಂದು ಹೊರಗೆ ಮಲಗಿದ್ದ ಇಬ್ಬರು ಯುವಕರನ್ನು ಒಳಗೆ ಬರಲು ಹೇಳಿದರು. ಅವರಿಗೆ ಕೇಳಿಸುವಂತೆ ರಾಮಾಯಣ, ಭಾರತದ ಕಥೆಗಳನ್ನು ಹೇಳಲಾರಂಭಿಸಿದರು. ವಾಲ್ಮೀಕಿಯ ಕತೆಯನ್ನು ಸವಿಸ್ತಾರವಾಗಿ ಹೇಳಿದರು. ಆ ಯುವಕರಿಗೆ ಗುರುಗಳೇಕೆ ಇಷ್ಟೊಂದು ಕಂಠಶೋಷಣೆ ಮಾಡಿಕೊಳ್ಳುತ್ತಿದ್ದಾರೆ ಎಂದು ಆಶ್ಚರ್ಯ! ನಿದ್ದೆ ಬರುತ್ತಿದ್ದರೂ ಆ ಕಥೆ ಕೇಳುವಂತೆ ನಟಿಸಿದ್ದರು. ಬೆಳಗಾಯಿತು. ದೊಡ್ಡಾಟ ನೋಡಲು ಹೋಗಿದ್ದವರು ಬರುವ ವೇಳೆಗೆ ಗುರುಗಳು ಸ್ನಾನಕ್ಕೆ ನೀರು ಕಾಯಿಸಲೆಂದು ಕೋಣೆಯ ಬಾಗಿಲು ತೆರೆದು ಹಿತ್ತಿಲ ಕಡೆಗೆ ಹೊರಟರು. ಆಗ ಎಲ್ಲೆಲ್ಲೂ ಕನ್ನ ಕೊರೆದಿರುವುದು ಕಾಣಿಸಿತು. ಹಿತ್ತಿಲ ಕಡೆಯಿಂದ ಗುರುಗಳಿದ್ದ ಕೋಣೆಯವರೆಗೂ ಕನ್ನಗಳು! ಎಲ್ಲಕ್ಕಿಂತ ಆಶ್ಚರ್ಯವೆಂದರೆ ಕಳ್ಳರು ಕನ್ನ ಕೊರೆಯುವ ಸಾಧನಗಳನ್ನೆಲ್ಲಾ ಅಲ್ಲಲ್ಲಿ ಬಿಸುಟು ಹೋಗಿದ್ದರು! ಎಲ್ಲರಿಗೂ ಆಶ್ಚರ್ಯ. ದೊಡ್ಡಾಟ ನೋಡಲು ಹೋಗಿದ್ದವರು ತಮ್ಮ ತಮ್ಮ ಒಡವೆ ವಸ್ತುಗಳು ಕಳ್ಳರ ಕೈಯಿಂದ ಉಳಿದುದಕ್ಕೆ ಆಶ್ಚರ್ಯಪಟ್ಟರು. ಆದರೆ ಕಳ್ಳರು ತಮ್ಮ ಸಾಧನಗಳನ್ನು ಬಿಸಾಡಿ ಹೋಗಿದ್ದು ಏಕೆಂದು ತಿಳಿಯದಾಗಿದ್ದಿತು.

ಮುಂದೆ ಒಮ್ಮೆ ಶೇಷಾಚಲರು ಮುರಗೋಡಿಗೆ ಹೋದಾಗ ರೈಲಿನಿಂದ ಇಳಿಯುತ್ತಲೆ ತಮ್ಮ ಬಳಿ ಬಂದು ಕೂಲಿಗಾಗಿ ನಿಂತ ವ್ಯಕ್ತಿಯನ್ನು ಕಂಡು ಮುಗುಳ್ನಕ್ಕರು. ಜತೆಯಲ್ಲಿದ್ದ ಭಕ್ತರಿಗೆ ಆಶ್ಚರ್ಯವೆನಿಸಿತು. ಆ ಕೂಲಿಯವನೇ, ತಾನೂ ತನ್ನ ಜೊತೆಗಾರರೂ ಅಂದು ಅಗಡಿ ಆಶ್ರಮದಲ್ಲಿ ಕದಿಯಲು ಬಂದವರೆಂದೂ ಗುರುವಿನ ಅಮೃತವಾಣಿ ತಮ್ಮನ್ನು ಆ ಹೇಯ ವೃತ್ತಿಯಿಂದ ಬಿಡುಗಡೆ ಮಾಡಿತೆಂದೂ ಹೇಳಿದ. ಈಗ ಕೂಲಿ ಕೆಲಸ ಮಾಡಿ ನೆಮ್ಮದಿಯ ಜೀವನ ನಡೆಸುತ್ತಿರುವುದನ್ನೂ ತಿಳಿಸಿದ. ಅಂದು ಆಶ್ಚರ್ಯಪಟ್ಟವರಿಗೆ ಈಗ ಗುರುವಿನ ಮಹಿಮೆ ಅರ್ಥವಾಯಿತು. ಕಳ್ಳರನ್ನು ತಿದ್ದಿ 'ಕಾಯಕವೇ ಕೈಲಾಸ' ಎಂಬುದನ್ನು ನಿರೂಪಿಸಿದ್ದರು. ಅವರನ್ನು ಥಳಿಸಿ ವಿದ್ರೋಹಿಗಳನ್ನಾಗಿಸದೆ ತಮ್ಮ ಸವಿಮಾತುಗಳಿಂದ ಅವರಿಗೆ ಒಳ್ಳೆಯ ಜೀವನ ಕರುಣಿಸಿದ್ದರು.

ಅಗಡಿಯ ಆನಂದವನದಲ್ಲಿ ನವರಾತ್ರಿ ಉತ್ಸವ ಚೆನ್ನಾಗಿ ನಡೆಯುತ್ತಿತ್ತು. ಒಮ್ಮೆ ಮಹದೇವ ಭಟ್ಟರೆಂಬುವರು ಮಗಳ ಮದುವೆ ಮಾಡಲೋಸುಗ ಸದ್ಗುರುವನ್ನು ಆಶ್ರಯಿಸಿ ಬಂದರು. ಅಲ್ಲಿಯೇ ಪೂಜಾಕಾರ್ಯಕ್ರಮಗಳಲ್ಲಿ ಎಲ್ಲವನ್ನೂ ಮರೆತು ಹೋಗಿದ್ದರು. ವಿಜಯದಶಮಿಯ ದಿನ ಅವರ ಬಳಿ ಬಂದ ಸದ್ಗುರು ತಮ್ಮ ಕೈಲಿದ್ದ ಚಿನ್ನದ ಕಡಗಗಳನ್ನು ಮಹದೇವ ಭಟ್ಟರಿಗೆ ಕೊಟ್ಟು "ಮಗಳ ಮದುವೆ ಮಾಡಲು ತಕ್ಕ ಏರ್ಪಾಟು ಮಾಡಿಕೊಳ್ಳಿ. ವ್ಯರ್ಥ ಕಾಲಹರಣ ಬೇಡ" ಎಂದರು. ಮಾರನೆಯ ಬೆಳಿಗ್ಗೆ ಗುರುಗಳ ಕೈ ಖಾಲಿ ಇರುವುದನ್ನು ಕಂಡ ಭಕ್ತರೊಬ್ಬರು ಅನುಮಾನಿಸುತ್ತಲೇ ಕೇಳಿದರು. ಅದಕ್ಕೆ ಗುರುವು "ಈ ದೇಹಕ್ಕಿಂತಲೂ ಕಡಗದ ಉಪಯೋಗ ಅವರಿಗೇ ಇದೆ. ಅದಕ್ಕಾಗಿ ಚಿದಂಬರನೇ ಅವರಿಗೆ ಕೊಡಿಸಿದ" ಎಂದು ನಿರ್ಮೋಹವಾಗಿ ಹೇಳಿ ಮುಗುಳ್ನಕ್ಕರು. ಅತಿಥಿ ಸತ್ಕಾರವೇ ಮುಖ್ಯವಾಗಿದ್ದ ಗುರುವಿಗೆ ಕಡಗ ಒಂದು ತೃಣವಾಗಿ ಕಂಡಿತ್ತು.

ಅನೇಕ ವಿಧದ ಲೋಕೋಪಕಾರದ ಕಾಯಕಗಳು ಗುರುವಿನಿಂದ ಆಗತೊಡಗಿದುವು. ಆಶ್ರಮ ವಿಸ್ತಾರವಾಯಿತು. ಉಗ್ರಾಣ,

ಪೂಜಾಗೃಹ, ಪಾಕಶಾಲೆ, ಭೋಜನಶಾಲೆ, ಅತಿಥಿಗಳ ಕೋಣೆ—ಹೀಗೆ ಆಶ್ರಮ ಬೃಹತ್ತಾಗಿ ಬೆಳೆಯಲಾರಂಭಿಸಿತು. 'ಆನಂದವನ' ಶೇಷಾಚಲ ಸಾಧುಗಳ ತಪೋವನ. ಅನ್ನದಾನ, ಜ್ಞಾನದಾನ ಮಾಡಿದ ಪರಮಪಾವನ ಸ್ಥಾನ. ವಿದ್ಯಾರ್ಥಿಗಳಿಗೆ ಪಾಠಶಾಲೆ ಸ್ಥಾಪಿತವಾಯಿತು. ಗುರುಗಳ ಅಪ್ಪಣೆಯಂತೆ 'ಸದ್ಬೋಧ ಚಂದ್ರಿಕೆ' ಎಂಬ ಮಾಸಪತ್ರಿಕೆಯನ್ನೂ ಪ್ರಾರಂಭಿಸಲಾಯಿತು. ಈ ಪತ್ರಿಕೆಯಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳ ಬಗ್ಗೆ ಅನೇಕ ಲೇಖನಗಳು ಬೆಳಕು ಕಂಡವು. ಒಂದೇ ವರ್ಷದಲ್ಲಿ ಸ್ವತಂತ್ರ ಮುದ್ರಣಾಲಯವೂ ಪ್ರಾರಂಭವಾಯಿತು. ೧೯೧೦ರಲ್ಲಿ 'ಶೇಷಾಚಲ ಮುದ್ರಣಾಲಯ' ಸ್ಥಾಪಿತವಾಯಿತು. ಕನ್ನಡ ಸಾಹಿತ್ಯದ ಉನ್ನತಿಗೆ ಈ ಪತ್ರಿಕೆ ದಾರಿದೀಪ. ಹೆಣ್ಣುಮಕ್ಕಳಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಿದ ಶ್ರೇಯಸ್ಸು ಈ ಸದ್ಬೋಧಚಂದ್ರಿಕೆಯದು. ಅಗಡಿಯ ಮನೆಮನೆಗೂ ಒಂದು ಕೈಚೀಲವನ್ನು ವೇದಪಾಠಶಾಲೆಯ ಕಡೆಯಿಂದ ಕೊಡಲಾಗುತ್ತಿತ್ತು. ಪ್ರತಿದಿನ ಅಡುಗೆ ಮಾಡುವ ಗೃಹಿಣಿ ಆ ಕೈಚೀಲಕ್ಕೆ ಒಂದು ಹಿಡಿಯ ಅಕ್ಕಿ ಹಾಕುತ್ತಿದ್ದಳು. ತಿಂಗಳಿಗೊಮ್ಮೆ ವಿದ್ಯಾರ್ಥಿಗಳು ಬಂದು ಅದನ್ನು ತೆಗೆದುಕೊಂಡು ಹೋಗುವ ಏರ್ಪಾಡಾಗಿತ್ತು. ಇದು ಮುಷ್ಟಿ ಭಿಕ್ಷೆ. ವಿದ್ಯಾರ್ಥಿಗಳ ಶ್ರೇಯಸ್ಸಿಗಾಗಿ ಇದರ ವ್ಯವಸ್ಥೆ.

ಅಗಡಿಗೆ ಬಂದ ಸಂತ ಶಿಶುನಾಳ ಷರೀಫ ಸಾಹೇಬರೂ ಶೇಷಾಚಲ ಸಾಧುಗಳನ್ನು ಭೇಟಿಯಾದರು. ಷರೀಫರನ್ನು ತುಂಬಾ ಆತ್ಮೀಯತೆಯಿಂದ ಬರಮಾಡಿಕೊಂಡ ಶ್ರೀ ಶೇಷಾಚಲರು ಪ್ರೇಮದಿಂದ ಸತ್ಕರಿಸಿ ಪರಮಾತ್ಮನ ಭಕ್ತಿಸುಧೆಯಿಂದ ಅವರನ್ನು ಸಿಂಚನಗೊಳಿಸಿದರು. ಅವರಿಂದ ಬೀಳ್ಕೊಂಡ ಷರೀಫರು "ಸಾಧು ನೋಡೆಲೋ........ ಸಾಧು ನೋಡೆಲೋ....." ಎಂದು ತಮ್ಮ ಕಂಚಿನ ಕಂಠದಿಂದ ಹಾಡಿದರು. ರಾಮಭಕ್ತರಾದ ಗೋಂದಾವಲಿ ಮಹಾರಾಜರೂ, ಬ್ರಹ್ಮಚೈತನ್ಯರೂ ಅಗಡಿಯಲ್ಲಿ ಸಾಧುಗಳನ್ನು ಸಂಧಿಸಿ ಅವರ ಆತ್ಮಜ್ಞಾನಕ್ಕೆ ಮರುಳಾಗಿ ಅವರನ್ನು ಕೊಂಡಾಡಿದ್ದರು.

ಒಮ್ಮೆ ಭಕ್ತರೊಬ್ಬರು ಸಾಧುಗಳನ್ನು ಮನೆಗೆ ಆಮಂತ್ರಿಸಬೇಕೆಂದು ಹಂಬಲಿಸುತ್ತಿದ್ದರು. ಅವರ ಬಡತನ ಮತ್ತು ಮನೆಯ ತಾಪತ್ರಯ ಈ ಸತ್ಕಾರ್ಯಕ್ಕೆ ಅಡ್ಡಿಯಾಗಿದ್ದವು. ಸಾಧುಗಳಿಗೆ ಆತಿಥ್ಯ ನೀಡುವ ಚೈತನ್ಯ ತಮಗಿಲ್ಲವೆಂಬ ಕೊರಗು ಅವರಿಗಿತ್ತು. ಒಮ್ಮೆ ಅವರನ್ನು ಕಂಡ ಸಾಧುಗಳು "ನಾಳೆ ನಿಮ್ಮ ಮನೆಯಲ್ಲಿಯೇ ನಮ್ಮ ಊಟ, ನಮಗೆ ಇಷ್ಟವಾದ ರಾಗಿಮುದ್ದೆಯನ್ನೇ ನೀವು ಮಾಡಿಸಬೇಕು" ಎಂದು ಅವರಿಗೆ ಅಪ್ಪಣೆ ಮಾಡಿದರು. ಆ ಭಕ್ತರಿಗೂ ಅವರ ಧರ್ಮಪತ್ನಿಗೂ ಇದರಿಂದ ತುಂಬಾ ಸಂತೋಷವಾಯಿತು. ಅವರ ಆತಿಥ್ಯದಿಂದ ತೃಪ್ತರಾದರು ಸದ್ಗುರು! ಮಾರನೆಯ ಬೆಳಗ್ಗೆ ಆ ಭಕ್ತರಿಗೆ ಆಶ್ಚರ್ಯವಾದುದೆಂದರೆ ಅವರ ದೂರದ ನೆಂಟರು ಗಾಡಿ ತುಂಬ ದವಸ, ಧಾನ್ಯ ತರಕಾರಿಗಳನ್ನು ತಂದು ಅವರಿಗೆ ಸಮರ್ಪಿಸಿದರು.

ಶೇಷಾಚಲರ ಕೌಟುಂಬಿಕ ಜೀವನ ದಡ ಸೇರಿತ್ತು. ಅವರ ಪತ್ನಿ ತೀರಿಕೊಂಡಿದ್ದರು. ಮಗ ಚಿದಂಬರ ಸಜ್ಜನಿಕೆಯ ಮೂರ್ತಸ್ವರೂಪನಾಗಿದ್ದ. ಸಾಧುವರ್ಯರು ತಾವು ನಡೆಸುತ್ತಾ ಬಂದಿದ್ದ ವೇದೋಕ್ತ ಕರ್ಮೋಪಾಸನೆ, ಸೂರ್ಯನಮಸ್ಕಾರ, ಚಿದಂಬರೋಪಾಸನೆ—ಇವುಗಳನ್ನು ಚಿದಂಬರನಿಗೇ ಸಮರ್ಪಿಸಿ ಸ್ವರೂಪಾನುಸಂಧಾನದಲ್ಲಿರಲು ಸಂಕಲ್ಪಿಸಿದರು. ಭಕ್ತರು ಇದಕ್ಕೆ ತಕ್ಕ ಎಲ್ಲ ಸಿದ್ಧತೆಗಳನ್ನೂ ಮಾಡಿದರು. ದಂಪತಿ ಪೂಜೆ, ಅನ್ನದಾನ, ದತ್ತ ಜಯಂತ್ಯುತ್ಸವದ ವಿಶೇಷ ಪೂಜೆಗಳು ಆರಂಭವಾದವು. ಭಾಗವಹಿಸಿದ ಜನಸಮೂಹ ಸಂತೃಪ್ತರಾದರು. ತಮ್ಮ ಜೀವನದುದ್ದಕ್ಕೂ ತಮಗೆ ನೆರವಾಗಿ ತಮ್ಮ ಕಷ್ಟಸುಖಗಳಲ್ಲಿ ಭಾಗಿಯಾದವರನ್ನೆಲ್ಲ ಆ ಸಂದರ್ಭದಲ್ಲಿ ಸತ್ಕರಿಸಲು ಸಾಧುಗಳು ನಿರ್ಧರಿಸಿದರು. ಗುರುಶಿಷ್ಯರೆಂಬ ಭೇದಭಾವವಿರಬಾರದೆಂದು ಆಶ್ರಮದಲ್ಲಿದ್ದವರನ್ನೆಲ್ಲಾ ಸತ್ಕರಿಸಿ ಗೌರವ ಸಲ್ಲಿಸಿದರು. ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂಬುದನ್ನು ನಿರೂಪಿಸಿದರು.

ಅವರ ಹೊರ ಜೀವನದಷ್ಟೇ ಅವರ ಅಂತಃಕರಣವೂ ಶುದ್ಧವಾಗಿ ನಿರಾಡಂಬರವಾಗಿತ್ತು. ಹೆಚ್ಚು ಹೆಚ್ಚು ಅಂತರ್ಮುಖಿಯಾಗುತ್ತಿದ್ದ ಸಾಧುಗಳು ದುರ್ಬಲರಾಗುತ್ತಿದ್ದುದು ಭಕ್ತರಿಗೆ ತಿಳಿಯದಿರಲಿಲ್ಲ. ಸಾಂಗ್ಲಿಯಿಂದ ಬಂದ ವೈದ್ಯರೊಬ್ಬರು ಅವರ ಬಳಿಯೇ ಇರಲು ನಿಯೋಜಿತರಾದರು. ಅಖಂಡ ಚಿದಂಬರ ಭಜನೆ, ನಾಮಪಾರಾಯಣಗಳು ಆರಂಭವಾದವು. ಗುರುಗಳಿಗೆ ಪ್ರಿಯವಾದ ಗ್ರಂಥಗಳ ಪಠನವಾಗತೊಡಗಿತು. ನಿರಂಜನಸ್ವರೂಪ ಶೇಷಾಚಲರ ಆತ್ಮವು ಭೌತಿಕ ದೇಹವನ್ನು ಪಂಚಭೂತಗಳಿಗೊಪ್ಪಿಸಿ ಚಿದಾನಂದದಲ್ಲಿ ಲೀನವಾಯಿತು. ಬ್ರಹ್ಮರಂಧ್ರದಿಂದ ಹೊರ ಬಂದ ಜ್ಯೋತಿ ಅನಂತ ವಿಶ್ವದಲ್ಲಿ ಸೇರಿಹೋಯಿತು.

ಗುರುಗಳ ಸಂಸ್ಕಾರವಾದ ಜಾಗದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ ಭಕ್ತರು ಶೇಷಾಚಲೇಶ್ವರನೆಂದೇ ಅದಕ್ಕೆ ಹೆಸರಿಸಿದರು. ಇಂದಿಗೂ ಶೇಷಾಚಲೇಶ್ವರ ಅದ್ದೂರಿಯಾಗಿ ಪೂಜಾ ಕೈಂಕರ್ಯಗಳನ್ನು ಪಡೆಯುತ್ತಿದ್ದಾನೆ. ಮಾನವ ಜನ್ಮದ ಧ್ಯೇಯವನ್ನು ಮೃದುಮಧುರ ಮಾತುಗಳಲ್ಲಿ ಭಕ್ತರಿಗೆ ತಿಳಿಸಿ ತಾನೂ ಅದರಂತೆಯೇ ನಡೆದುಕೊಂಡ ಮಹಾತ್ಮರು ಇವರು.

ಕನ್ನಡ ಸಾರಸ್ವತ ಲೋಕದ ದಿಗ್ಗಜರೆಲ್ಲಾ ಗುರು ಶೇಷಾಚಲರನ್ನು ತುಂಬು ಹೃದಯದಿಂದ ಗೌರವಿಸಿದ್ದಾರೆ. ಕನ್ನಡದ ಆಸ್ತಿಯೆಂದೇ ಖ್ಯಾತನಾಮರಾದ ಮಾಸ್ತಿಯವರು ತಮ್ಮ ನೀಳ್ಗವಿತೆಯಲ್ಲಿ ಗುರುಗಳ ಬಗ್ಗೆ ಅಪಾರ ಗೌರವ ಸಲ್ಲಿಸಿದ್ದಾರೆ. ತಳುಕಿನ ವೆಂಕಣ್ಣಯ್ಯನವರು ತಮ್ಮ ತಂದೆಯವರು ಅತ್ಯಂತ ಭಕ್ತಿಶ್ರದ್ಧೆ ತೋರಿಸುತ್ತಿದ್ದ ಗುರುಗಳನ್ನು ತುಂಬಾ ಸ್ಮರಿಸುತ್ತಾರೆ. "ಶ್ರೀ ಶೇಷಾಚಲರು ಸಂನ್ಯಾಸಿಗಳಲ್ಲ, ಗೃಹಸ್ಥರು. ಸಾಮಾನ್ಯರಂತೆ ಸಂಸಾರದ ಕಷ್ಟಕಾರ್ಪಣ್ಯಗಳನ್ನು ಉಂಡವರು. ಲೋಕ ಜೀವನದಲ್ಲಿ ಮಗ್ನರಂತೆ ಕಂಡರೂ ಅಂತರಂಗದಲ್ಲಿ ಪರಮಾತ್ಮ ಚಿಂತನೆಯಲ್ಲಿಯೇ ಇರುತ್ತಿದ್ದರು. ಇದೇ ಮಹಾಯೋಗಿಯ ಲಕ್ಷಣ. ಆದರ್ಶ ಗೃಹಸ್ಥ ಧರ್ಮ" ಎಂದಿದ್ದಾರೆ.

'ಸದ್ಬೋಧ ಚಂದ್ರಿಕೆ'ಯ ಅಮೃತೋತ್ಸವ ಲೇಖನದಲ್ಲಿ ತ.ಸು. ಶಾಮರಾಯರು ಗುರುಗಳನ್ನು ತುಂಬಾ ಸ್ಮರಿಸಿಕೊಂಡಿದ್ದಾರೆ. ಆನಂದವನವನ್ನು ಅವರು **ಜೀವನನ್ನು ಶಿವನನ್ನಾಗಿಸುವ ಮುಕ್ತಿ ಮಂದಿರ** ಎಂದು ಕರೆದಿದ್ದಾರೆ.

-೦-